ದೇವರುಗಳೇ ಆಗಿ ಬಿಡುವರೋ? ಏನಾದರೂ ಮಾಡಬಹುದೇ? ಅವರನ್ನು ಕೇಳುವವರು, ಅವರಿಗೆ ಹೇಳುವವರು ಇರುವುದಿಲ್ಲವೇ?'

ಕಳೆದದ್ದನ್ನು ಕುರಿತಾಗಿ ಯೋಚಿಸುತ್ತಿದ್ದಂತೆಯೇ ಸಂದೀಪ್‌ನಲ್ಲಿ ಸಿಟ್ಟು ಹೆಚ್ಚಾಗುತ್ತಾ ಹೋಗುತ್ತಿತ್ತು. ಹಲ್ಲು ಕಟ ಕಟ ಕಡಿದನು. ಮೈಯಲ್ಲಿರುವ ನರಗಳೆಲ್ಲಾ ಸಿಟ್ಟಿಗೆದ್ದವೇನೋ, ಮೈತೂಗುತ್ತಿತ್ತು. ಒಂದು ಸ್ಥಳದಲ್ಲಿ ಒಪ್ಪಾಗಿ ಕುಳಿತು ಯೋಚಿಸಲಾರದವನಾಗಿದ್ದ. ಸಂಯಮದಿಂದ ಮಾತನಾಡಲಾರದವನಾಗಿದ್ದ. ಆಕಡೆ ಈಕಡೆ ಓಡಾಡತೊಡಗಿದ. ಗಟ್ಟಿಯಾಗಿ ಅಣ್ಣನ ಕಿರುಚಾಟ ಕೇಳಿಸಿದ್ದೇ ತಡ ಶ್ರಿಯಾ ರೂಮ್‌ನಿಂದ ಹೊರಬಂದಳು.

ಸಿಟ್ಟಿನಲ್ಲಿರುವ ಅಣ್ಣನನ್ನು ನೋಡಿದ ಕೂಡಲೇ ಏನಾಗಿದೆಯೆಂದು ಅರ್ಥವಾಯಿತು. ಒಂದು ಸೋಫಾದಲ್ಲಿ ಒಂದು ಬದಿಗೆ ಸರಿದು ಕೂತಳು.

ಶ್ರಿಯಾಳನ್ನು ನೋಡಿದ ಕೂಡಲೇ ಸಂದೀಪನಿಗೆ ಎದೆ ಹಿಂಡಿದಂತಾಯಿತು. ನಗುತ್ತಾ, ನಗಿಸುತ್ತಿದ್ದ ತನ್ನ ತಂಗಿ ಈ ದಿನ ಹೀಗಿರಲು ಕಾರಣ ಅವನೇ, ಆ ಬೆನ್. ಸೈಡ್ ಟೇಬಲ್ ಮೇಲಿರುವ ಗೊಂಬೆಯನ್ನು ಸಿಟ್ಟಿನಿಂದ ಕಿತ್ತೆಸೆದ. ತಂಗಿಯನ್ನು ತಬ್ಬಿಕೊಳ್ಳಲು ಹೋದ. ಅಪ್ರಯತ್ನವಾಗಿಯೇ ಸ್ವಲ್ಪ ದೂರ ಸರಿದಳು ಶ್ರಿಯಾ. ಸಂದೀಪನೂ ಕೈಯನ್ನು ಹಿಂದಕ್ಕೆಳೆದುಕೊಂಡ.

ಇಬ್ಬರಿಗೂ ಮೂರುವರ್ಷದ ವ್ಯತ್ಯಾಸ. ಚಿಕ್ಕಂದಿನಿಂದಲೂ ಇಬ್ಬರಿಗೂ ಹೋರಾಹೋರಿಯಾಗಿ ಜಟಾಪಟಿ ಮಾತಿನ ಯುದ್ಧಗಳೇ. ಕುಷನ್‌ಗಳೊಡನೆ ರೆಸಲಿಂಗ್ ಮಾಡುತ್ತಾ ಒಬ್ಬರಮೇಲೆ ಮತ್ತೊಬ್ಬರು ಬಿದ್ದು ಹೊಡೆದುಕೊಳ್ಳುತ್ತಿದ್ದರು. ಯಾರು ರೈಟ್ ಎಂದು ಹೇಳಬೇಕೆಂದು ತಂದೆತಾಯಿಯನ್ನು ಸತಾಯಿಸುತ್ತಿದ್ದರು. ಇಬ್ಬರೂ ಮನೆಯಲ್ಲಿದ್ದರೆ ಕಿರುಚಾಟಗಳು, ಕೇಕೆ, ನಗೆ, ಗೊಡವೆಗಳು- ಆದರೆ ಈ ದಿನ ಆ ಅಣ್ಣತಂಗಿಯರು ಸಿಟ್ಟಿನಿಂದ, ಮೌನದಿಂದ ಇದ್ದಾರೆ. ಇಬ್ಬರ ನಡುವೆ ಹೇಳಲಾರದ ದೂರ.

ನಿನ್ನೆ ಮೊನ್ನೆಯವರೆಗೆ ಶಾರ್ಟ್ಸ್‌ನೊಂದಿಗೆಯೇ ತನ್ನ ಮುಂದೆ ತಿರುಗಾಡಿದ ಮುದ್ದಿನ ತಂಗಿ ಒಂದೇ ಸಲ ಹಿರಿತನಬಂದಂತೆ ದೂರವಾಗಿ ಕೂತಿದ್ದಾಳೆ. ತಂಗಿಗೆ ಈಗ ತಾನೊಬ್ಬ ಗಂಡಸಿನಂತೆ ಕಾಣುತ್ತಿರುವ ಬಗ್ಗೆ ಒಂದು ಸಣ್ಣ ನೀರಿನ ಹನಿ ಕಣ್ಣಿನಿಂದ ಧುಮುಕಿ ಹೊರಗೆ ಬರುತ್ತಿದ್ದಂತೆ ಥಟ್ಟನೆ ಎದ್ದು ಹೊರಗೆ ಹೊರಟ.

ನಿನ್ನೆ ಮೊನ್ನೆಯವರೆಗೆ ತಮ್ಮ ಮಕ್ಕಳಿಬ್ಬರೂ ಪ್ರಿ-ಸ್ಕೂಲಿಗೆ ಹೋಗುತ್ತಿರುವಂತೆಯೇ ಇದೆ. ಅಷ್ಟರಲ್ಲೇ ಕಾಲೇಜಿಗೆ ಬಂದ ಮಕ್ಕಳ ಬೆಳವಣಿಗೆ ಕಣ್ಣು ಮುಂದೆ ಕಾಣುತ್ತಿದೆ ಆ ತಂದೆ-ತಾಯಿಯರಿಗೆ. ಶ್ರಿಯಾಳಿಗೆ ಮೊದಲನೆಯ ಸಲ ಪಿರಿಯಡ್ಸ್ ಬಂದಾಗ ಕೂಡಾ ತನ್ನ ಮಗಳು ದೊಡ್ಡವಳಾಗಿರುವಳೆಂಬ ಭಾವನೆ ಉಂಟಾಗಲಿಲ್ಲ ಮಾಲತಿಗೆ. ಇವತ್ತು ತನ್ನ ಮಗಳನ್ನು ಹೀಗೆ ನೋಡುತ್ತಿದ್ದರೆ ಎದೆ ಕಸಿವಿಸಿಗೊಳ್ಳುತ್ತಿದೆ. ಸಣ್ಣ ಏಟು ತಾಕಿದರೂ 'ಡ್ಯಾಡ್' ಎನ್ನುತ್ತಾ ತನ್ನ ಹೆಗಲ ಮೇಲೆ ತಲೆಯೂರಿ ಅಳುವ ನನ್ನ ಮುದ್ದಿನ ಮಗಳು ಈ ದಿನ ಮನೆಗೆ ಬಂದಿರುವ ಅತಿಥಿಯಂತೆ ದೂರವಾಗಿ ಮತ್ತೊಂದು ಸೋಫಾದಲ್ಲಿ ಕುಳಿತಿರುವುದನ್ನು ನೋಡಿ ಪ್ರಸಾದ್ ಕೂಡಾ ಸಹಿಸಲಾರದೇ ಅಲ್ಲಿಂದ ಎದ್ದು ಹೊರಟುಹೋದ. ಅಳುತ್ತಾ ಮಾಲತಿ, ಶ್ರಿಯಾ ಮೌನವಾಗಿ ಆ ಹಾಲ್‌ನಲ್ಲಿ ಕುಳಿತಿದ್ದರು.

* * *

ಈ ಒಂದು ತಿಂಗಳಲ್ಲಿ ಬಹಳಷ್ಟು ನಡೆದವು. ಶ್ರಿಯಾ ನಿದ್ದೆ ಹೋಗಲಾರದವಳಾದಳು. ಪ್ರತೀರಾತ್ರಿ ಅವೇ ಕೆಟ್ಟ ಕನಸುಗಳು. ಮೈಯೆಲ್ಲಾ ಬೆವರಿನಿಂದ ನೆನೆದಂತೆ, ಎದೆಯ ಮೇಲೆ ಭಾರವಾದ ಕಲ್ಲನ್ನಿಟ್ಟು ಒತ್ತುತ್ತಿರುವಂತೆ ಬಾಧೆಯಿಂದ ಗಟ್ಟಿಯಾಗಿ ಕಿರುಚುತ್ತಿದ್ದಳು. ಪಕ್ಕದಲ್ಲಿ ಮಲಗುತ್ತಿರುವ ಮಾಲತಿ, ನೀರು ಕುಡಿಸಿ, ಧೈರ್ಯ ಹೇಳಿ ಮತ್ತೆ ಮಲಗಿಸುತ್ತಿದ್ದಳು. ಶ್ರಿಯಾಳನ್ನು ಟ್ರಾಮಾ ಕೌನ್ಸಿಲಿಂಗ್‌ಗೆ ಕರೆದೊಯ್ಯುತ್ತಿದ್ದರು. ಕುಟುಂಬವೆಲ್ಲಾ ಕಾಲೇಜಿಗೆ ಹೋಗಿ, ಡೀನ್‌ನೊಡನೆ ಮಾತನಾಡಿದ್ದಾರೆ. ಹೋಗುವಾಗ ಇರುವ ನಂಬಿಕೆ, ಬರುವಾಗ ಯಾರಲ್ಲೂ ಇರಲಿಲ್ಲ. ಮನೆಗೆ ಬಂದಂದಿನಿಂದ ಶ್ರಿಯಾ ಮಾತಾಡಿದ್ದು ಕಡಿಮೆ. ರೂಮಿನಲ್ಲಿ ಬಾಗಿಲು ಹಾಕಿ, ಕುಳಿತುಕೊಳ್ಳುತ್ತಿದ್ದಳು. ಸಂದೀಪ್ ಒಂದು ವಾರ ಮನೆಯಲ್ಲಿದ್ದು ಫೈನಲ್ ಇಯರ್ ಆಗಿರುವುದರಿಂದ ಮತ್ತೆ ಬರುವುದಾಗಿ ಹೇಳಿ ಕಾಲೇಜಿಗೆ ಹೋಗಿಬಿಟ್ಟ.

ಅಂದು ಮಾತಾಡಬೇಕೆಂದು ಶ್ರಿಯಾಳನ್ನು ಕರೆದರು. ಎಲ್ಲರೂ ಹಾಲ್‌ನಲ್ಲಿ ಕುಳಿತರು.

'ನೋಡು ಶ್ರಿಯಾ, ನಮ್ಮ ಪ್ರಯತ್ನವನ್ನು ನಾವು ಮಾಡಿದ್ದೇವೆ. ಕ್ಯಾಂಪಸ್‌ನಲ್ಲಿ ಜರುಗಲಿಲ್ಲವೆಂದು ಕಾಲೇಜಿನವರು ಕೈಕೊಟ್ಟು ಬಿಟ್ಟರು. ಪೊಲೀಸ್